# 7

# ವೈಯಕ್ತಿಕ ಸಂಬಂಧಗಳ ಕೌಶಲ್ಯಗಳು

ಮುಂದಿನ ಏಳು ಪಾಠಗಳು ನಾಯಕತ್ವದ ಆಚರಣೆಯ ಬಗ್ಗೆ ವಿವರಿಸುತ್ತವೆ ನಾಯಕರಿಗೆ ಅಗತ್ಯವಾದ - ವೈಯಕ್ತಿಕ ಸಂಬಂಧಗಳ ಕೌಶಲ್ಯಗಳನ್ನು, ಸಂಪರ್ಕಕೌಶಲ್ಯಗಳನ್ನು, ಸಮಾಲೋಚಿಸುವ ಕೌಶಲ್ಯಗಳನ್ನು, ಮತ್ತು ಸಂಘಟನಾ ಕೌಶಲ್ಯಗಳನ್ನು ಪರಿಚಯಿಸುತ್ತವೆ.

ಈ ಪಾಠಗಳ ಮೂಲ ಪ್ರಮೇಯವು ಒಬ್ಬ ಸಭಾ ನಾಯಕನು ಅವನು ನೆರವೇರಿಸುವ ಪಾತ್ರಕ್ಕೆ ಅರ್ಹನಾಗಿದ್ದರೂ ದೇವರು ಅವನಿರುವಂತೆ ಅವನ ಪಾತ್ರವನ್ನು ಬೆಳಿಸಿಕೊಳ್ಳುವ ಇಲ್ಲವೇ ಸುಧಾರಿಸಿಕೊಳ್ಳುವ ಅಗತ್ಯತೆ ಅವನಿಗಿರುತ್ತದೆ. "ನೀನು ಏನಾಗಿರಬೇಕೆಂದು ದೇವರ ವಾಕ್ಯವು ನಿನಗೆ ಹೇಳುವಂತೆ ನೀನು ಇದ್ದರೆ, ಯಾವುದೇ ಕೌಶಲ್ಯಗಳನ್ನು ಕಲಿಯುವದರ ಬಗ್ಗೆ ನೀನು ಚಿಂತಿಸಬೇಕಾಗಿರುವದಿಲ್ಲ. ಸ್ವಾಭಾವಿಕವಾಗಿ ಬರುವುದನ್ನು ನೀನು ಮಾಡುವಿ, ಮತ್ತು ಪ್ರತಿಯೊಂದು ಅತ್ಯುತ್ತಮವಾದದ್ದಕ್ಕಾಗಿ ಕಾರ್ಯ ಮಾಡುವುದು, ಒಬ್ಬ ಮನುಷ್ಯನು ಒಬ್ಬ ಕುರುಬನಾಗಿರುವಾಗ ಅವನು ಕುರಿಗಳನ್ನು ಅವುಗಳಿಗೆ ಸಹಾಯ ಮಾಡುವದರಿಂದ, ಅವುಗಳ ಮುಂದೆ ಹೋಗುವದರಿಂದ, ಅವುಗಳನ್ನು ಪ್ರೀತಿಸುವದರಿಂದ, ಮತ್ತು ಅವು ತಪ್ಪಿಹೋಗುವಾಗ ಅವುಗಳನ್ನು ಹುಡುಕುವದರಿಂದ ನಡಿಸುವನು" ಎಂದು ಯಾರಾದರೂ ಹೇಳಬಹುದು. ಯಾವನಾದರೂ ಅದನ್ನು ಮಾಡುವದನ್ನು "ಹೇಗೆಂದು ಕಲಿತು ಕೊಳ್ಳ ಬಹುದು"? ಕೌಶಲ್ಯಗಳ ಅಧ್ಯಯನವು ಯಾಕೆ ಕೂಡಿಸಲ್ಪಡಬೇಕು?

## ವೈಯಕ್ತಿಕ ಸಂಬಂಧಗಳ ಕೌಶಲ್ಯಗಳನ್ನು ಬೆಳೆಸುವ ಅಗತ್ಯತೆ

### ಸಭೆಯ ನಾಯಕತ್ವ ಸ್ವಭಾವ

ಮೊದಲನೆಯದು, ಸಭೆಯ ನಾಯಕರು ತಾವು ನಡಿಸುವ ಅದ್ವಿತೀಯ ರೀತಿಯ ಕಾರಣದಿಂದ ವೈಯಕ್ತಿಕ ಸಂಬಂಧಗಳ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅಗತ್ಯತೆಯಿರುತ್ತದೆ. ಸಭೆಯ ನಾಯಕರು, ಯಜಮಾನರು, ಸೇನಾಪತಿಗಳು ಇಲ್ಲವೇ ತರಬೇತಿ ಕೊಡುವವರು ನಡಿಸುವ ರೀತಿ ಯಲ್ಲಿ ನಡಿಸಿದರೆ, ಇಲ್ಲವೇ ತಂದೆ ತಾಯಿಗಳು ನಡಿಸುವಂತೆ ನಡಿಸಿದರೆ, ಅವರು ನಾಯಕತ್ವದ ಕೌಶಲ್ಯಗಳನ್ನು ಕಲಿಯಲಿಕ್ಕೆ ಕಾರಣಗಳಿಲ್ಲವೆಂದು ಹೇಳಬಹುದು.[1] "ನಾನು ಅವರಿಗೆ ಏನು ಮಾಡಬೇ ಕೆಂದು ಹೇಳುತ್ತೇನೆ, ಮತ್ತು ಅವರು ಅದನ್ನು ಮಾಡುತ್ತಾರೆ" ಎಂದು ಅವರು ಹೇಳಬಹದು. ಅದು ಯಜಮಾನರ ಬಗ್ಗೆ, ಸೇನಾಪತಿಗಳ ಬಗ್ಗೆ, ತರಬೇತಿ ಕೊಡುವವರ ಬಗ್ಗೆ ಸತ್ಯವಾಗಿರಬಹುದು. ಆದರೆ ಅದು ಸಭಾನಾಯಕರ ಬಗ್ಗೆ ಸತ್ಯವಾಗಿರುವದಿಲ್ಲ, ಇತರ ನಾಯಕರು ಬಹುಮಾನಗಳ ಮತ್ತು ಶಿಕ್ಷೆಗಳ ಮಿಶ್ರಣದಿಂದ ತಮ್ಮ ಹಿಂಬಾಲಕರು ವಿಧೇಯರಾಗುವಂತೆ ಮಾಡಬಹುದು. ಸಭೆಯ ನಾಯಕರಿಗೆ ಅದೇ ರೀತಿಯ ನಿಯಂತ್ರಣ ಇರುವದಿಲ್ಲ.

ಸಭೆಯಲ್ಲಿ ಪ್ರತಿಯೊಬ್ಬರೂ ಸಭೆಯಿಂದ ಸಂಬಳವನ್ನು ಪಡೆಯುವರೆಂದು ತಿಳಿಯಿರಿ ಮತ್ತು ಸಂಬಳವು ಎಷ್ಟಿರಬೇಕು ಹಾಗೂ ಅದನ್ನು ಮುಂದುವರಿಸಬೇಕೋ ಇಲ್ಲವೋ ಎಂಬುದನ್ನು ಹಿರಿಯರು ನಿರ್ಣಯಿಸಬೇಕು ಎಂದು ತಿಳಿಯಿರಿ. ಆಗ ಹಿರಿಯರು ಸದಸ್ಯರಿಗೆ, "ರೋಗಿಗಳನ್ನು ಮನೆಯಲ್ಲಿ ಹಾಸಿಗೆ ಹಿಡಿದವರನ್ನು ನೀವು ಸಂದರ್ಶಿಸದಿದ್ದರೆ, ನಿನಗೆ ಸಂಬಳ ಕೊಡಲ್ಪಡುವದಿಲ್ಲ" ಎಂದು ಹೇಳಬಹುದು. ಸಭಾ ಹಿರಿಯರು ತಮಗಾಗಿ ಸದಸ್ಯರ ಗೌರವದ ಬಗ್ಗೆ ಇಲ್ಲವೇ ಸಹಾಯಕ್ಕಾಗಿ ಅವರು ಕೇಳುವ ರೀತಿಯ ಬಗ್ಗೆ ಚಿಂತಿಸಬೇಕಾಗಿಲ್ಲ.

ಅವರು ಸದಸ್ಯರಿಗೆ ಏನು ಮಾಡಬೇಕೆಂದು ಹೇಳುವರು ಮತ್ತು ಅವರು ಅಧೀನರಾಗಲು ವಿರೋಧಿಸಿದರೆ ಅವರನ್ನು ತೆಗೆದು ಹಾಕುವದರಿಂದ ತಮ್ಮ ಇಚ್ಛೆಯಂತೆ ವರ್ತಿಸುವರು. ಇದು ಸಭೆಯು ಕೆಲಸಮಾಡುವ ರೀತಿಯಲ್ಲ! ಸಭೆಯ ಸದಸ್ಯರು ಸಭೆಯ ಕೆಲಸದಲ್ಲಿ ಹೆಚ್ಚಾಗಿ ತೊಡಗಬೇಕೆಂದು ಬಯಸಿದರೆ, ಅವರು ಅದನ್ನು ಮಾಡುವಂತೆ ಪ್ರೋತ್ಸಾಹಿಸಬೇಕು. ಅದಕ್ಕೆ ನಾಯಕತ್ವದ ಕೌಶಲ್ಯಗಳು ಬೇಕಾಗುತ್ತವೆ.

ಸಭಾ ಹಿರಿಯರು ಹಿರಿಯರಾಗಿರಲಿಕ್ಕೆ ದೇವರವಾಕ್ಯದ ಪ್ರಕಾರ ಅರ್ಹರಾಗಿದ್ದ ಕಾರಣದಿಂದ ಅವರಿಗೆ ಯಾಂತ್ರಿಕವಾಗಿ ಆ ಕೌಶಲ್ಯಗಳು ಇರುವವೋ? ಅಗತ್ಯವಾಗಿ ಇರಬೇಕಾಗಿಲ್ಲ. ಹಿರಿಯತನಕ್ಕಾಗಿ ಅರ್ಹತೆಗಳು: ಅವೇ ಆಗಿವೆ. ಅರ್ಹತೆಗಳು ಒಬ್ಬ ಹಿರಿಯನು ನೇಮಿಸಲ್ಪಡುವ ಮೊದಲು ಒಬ್ಬ ಹಿರಿಯನು ಏನಾಗಿರಬೇಕೆಂದು ಅವು ವಿವರಿಸುತ್ತವೆ. ತನ್ನ ನಾಯಕತ್ವದ ಕೌಶಲ್ಯಗಳನ್ನು ಸುಧಾರಿಸಿಕೊಳ್ಳುವರಿಂದ, ಅವನು ಸಭೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಡಿಸುವ ಸಾಧ್ಯತೆಯನ್ನು ಅವು ತೆಗೆದು ಹಾಕುವದಿಲ್ಲ. ಪ್ರಸಂಗಿಸಲಿಕ್ಕೆ ಅರ್ಹತೆಯುಳ್ಳವರು ಸುಧಾರಿಸಿಕೊಳ್ಳಲಿಕ್ಕೆ ಅವಶ್ಯಕತೆಯಿರುವಂತೆ, ಹಿರಿಯರು ಹೆಚ್ಚು ಪರಿಣಾಮಕಾರಿಯಾದವರಾಗಿರಲು ಹುಡುಕುವ ಅಗತ್ಯತೆಯಿದೆ.

**ಹೊಸ ಒಡಂಬಡಿಕೆಯ ಬೋಧನೆ**

ಎರಡನೆಯದು, ಸಭೆಯ ನಾಯಕರು ನಾಯಕತ್ವದ ಕೌಶಲ್ಯಗಳನ್ನು ಬೆಳಸಿಕೊಳ್ಳುವ ಅಗತ್ಯತೆಯಿದೆ ಯಾಕಂದರೆ ಆತ್ಮಿಕ ಧ್ಯೇಯಗಳನ್ನು ಸಾಧಿಸಲು ಅತ್ಯುತ್ತಮ ಮಾರ್ಗಗಳನ್ನು ಹುಡುಕುವುದು ಪರಿಶುದ್ಧ ಬರಹಕ್ಕನುಗುಣವಾದದ್ದಾಗಿದೆ. ಹಲವಾರು ಹೊಸ ಒಡಂಬಡಿಕೆಯ ವಾಕ್ಯಭಾಗಗಳು ಈ ತತ್ವವನ್ನು ತೋರಿಸುತ್ತವೆ.

*ನಾಯಕರು "ಸರ್ಪಗಳಂತೆ ಜಾಣರಾಗಿರಬೇಕು."* ಯೇಸುವು ಹನ್ನೆರಡು ಜನರನ್ನು ಮಿತಿಯುಳ್ಳ ಸೇವೆಯ ಮೇಲೆ ಕಳುಹಿಸಿದಾಗ, ಆತನು ಅವರಿಗೆ, "ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಹೋಗಿಸಿದಂತೆ ನಾನು ನಿಮ್ಮನು ಕಳುಹಿಸಿಕೊಡುತ್ತೇನೆ. ಆದದರಿಂದ ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರ್ರಿ" (ಮತ್ತಾಯ 10:16; NRSV) ಎಂದು ಹೇಳಿದನು. "ಸರ್ಪಗಳಂತೆ ಜಾಣರಾಗಿರುವುದು" ಹನ್ನೆರಡು ಜನರು, ಪ್ರೇರೇಪಿಸಲ್ಪಟ್ಟವರಾಗಿದ್ದರೂ (ಮತ್ತಾಯ 10:19, 20), ಸಾಧ್ಯವಾದ ಮಟ್ಟಿಗೆ, ಅವರು ಎದುರಿಸಬಹುದಾದ ಹಿಂಸೆಯನ್ನು ತಪ್ಪಿಸಿಕೊಳ್ಳಲು ಮತ್ತು ತಮ್ಮ ಸಂದೇಶಕ್ಕೆ ಅತೀ ಹೆಚ್ಚು ಸ್ವಾಗತಿಸುವ ಕೇಳುಗಳನ್ನು ಕಂಡು ಕೊಳ್ಳಲಿಕ್ಕೆ ತಮ್ಮ ಬುದ್ಧಿವಂತಿಕೆಯ ನಿರ್ಣಯವನ್ನು ಉಪಯೋಗಿಸಬೇಕೆಂಬುದನ್ನು ಅನ್ವಯಿಸುತ್ತದೆ (ಮತ್ತಾಯ 10:11-14). ಆ ಸಂಗತಿಗೆ ಕೂಡಿಸಿ, ದೇವರು ತನ್ನ ಸಭೆಗಾಗಿ "ಹಿರಿಯರಿಂದ" ನಡಿಸಲ್ಪಡುವದನ್ನು ಆಯ್ಕೆ ಮಾಡಿಕೊಂಡನು; ವಯಸ್ಸಾದವರು, ನಿರೂಪಣೆಯಿಂದ, ಹೆಚ್ಚು ಬುದ್ಧಿವಂತರಾದವರು ಆಗಿರುತ್ತಾರೆ. ಸಭೆಯು ಬುದ್ಧಿವಂತ ನಾಯಕರಿಂದ ನಡಿಸಲ್ಪಡಬೇಕೆಂದು ದೇವರು ಬಯಸುತ್ತಾನೆ. ಬುದ್ಧಿವಂತಿಕೆಯಿಂದ ಕಾರ್ಯಮಾಡುವುದು, ಕೌಶಲ್ಯದಿಂದ ಕೆಲಸ ಮಾಡುವುದಾಗಿದೆ.

*ನಾಯಕರು "ಜಾಣ್ಮೆಯುಳ್ಳವರಾಗಿರುವದನ್ನು" ಕಲಿತು ಕೊಳ್ಳತಕ್ಕದ್ದು.* ಅನ್ಯಾಯಗಾರನಾದ ಮನೆವಾರ್ತೆಯವನ ಸಾಮ್ಯದಲ್ಲಿ (ಲೂಕ 16:1-9), ತನ್ನ ಯಜಮಾನನ ಆಸ್ತಿಯನ್ನು ದುರುಪಯೋಗ ಪಡಿಸಿಕೊಂಡ ಮತ್ತು ಕೆಲಸದಿಂದ ತೆಗೆದು ಹಾಕಲ್ಪಡುವದಕ್ಕೆ ಮೊದಲು ಲೆಕ್ಕ ಕೊಡುಲು ಕೇಳಲ್ಪಟ್ಟ ಮನೆವಾರ್ತೆಯವನನ್ನು ಯೇಸುವು ವಿವರಿಸಿದನು. ಆ ದುಷ್ಟ ಮನೆವಾರ್ತೆಯವನು ತಾನು ಕೆಲಸದಿಂದ ತೆಗೆದು ಹಾಕಲ್ಪಟ್ಟ ಮೇಲೆ ತನಗಾಗಿ ಒಂದು ಸ್ಥಾನವನ್ನು ಸಿದ್ಧಪಡಿಸಿಕೊಳ್ಳುವದಕ್ಕಾಗಿ ಅವನು ತನ್ನ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡಿದ್ದನು. ಈ ಮಾತುಗಳಿಂದ ಯೇಸುವು ಸಾಮ್ಯವನ್ನು ಮುಕ್ತಾಯಗೊಳಿಸಿದನು:

… ಯಾಕಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ. ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ; ಹೀಗೆ ಮಾಡಿದರೆ ಅದು ನಿಮ್ಮ ಕೈ ಬಿಟ್ಟು ಹೋದಾಗ ಅವರು ನಿಮ್ಮನ್ನು ಶಾಶ್ವತವಾದ ವಾಸ ಸ್ಥಾನಗಳಲ್ಲಿ ಸೇರಿಸಿಕೊಳ್ಳುವರು (ಲೂಕ 16:8, 9).

ಕ್ರೈಸ್ತರು ತಮ್ಮ ಮೂಲಗಳನ್ನು ಉಪಯೋಗಿಸುವದರಲ್ಲಿ "ಜಾಣತನದಿಂದ," ಇಲ್ಲವೇ ಬುದ್ಧಿವಂತಿಕೆಯಿಂದ, ವರ್ತಿಸುವದನ್ನು ಕಲಿತುಕೊಳ್ಳಬೇಕೆಂಬುದನ್ನು ಯೇಸುವು ಈ ಸಾಮ್ಯದಲ್ಲಿ ಬೋಧಿಸಲು ಉದ್ದೇಶಿಸಿದ್ದನು. ಅಪ್ರಮಾಣಿಕ ಮನೆವಾರ್ತೆಯವನು ತನ್ನ ಜಾಣತನವನ್ನು ಸ್ವಾರ್ಥದ ಉದ್ದೇಶಗಳಿಗಾಗಿ ಉಪಯೋಗಿಸಿದನು, ಕ್ರೈಸ್ತನ ಉದ್ದೇಶವು ಜನರು ರಕ್ಷಿಸಲ್ಪಡುವದಕ್ಕಾಗಿ ಇರುತ್ತದೆ. ಬುದ್ಧಿವಂತರಾಗಿರುವ ಅವಶ್ಯಕತೆಯಿದೆ, ಮೂಲಗಳನ್ನು ಚತುರತೆಯಿಂದ ಉಪಯೋಗಿಸಬೇಕೆಂದು ಯೇಸುವು ಬೋಧಿಸಿದನು.

*ನಾಯಕರು ಪ್ರೀತಿಸುವ ಮತ್ತು ಮನವೊಲಿಸುವ ಮಾತನ್ನು ಉಪಯೋಗಿಸತಕ್ಕದ್ದು.* ಸಭೆಯ ನಾಯಕರು ಸರಿಯಾದ ಸಂಗತಿಯನ್ನು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಹೇಳುವ ಅಗತ್ಯತೆಯಿದೆ:

*ನಿಮ್ಮ ಸಂಭಾಷಣೆ ಯಾವಾಗಲೂ ಇಂಪಾಗಿಯೂ ರಸವತ್ತಾಗಿಯೂ ಇರಲಿ;* ಹೀಗೆ ನೀವು ಯಾರಾರಿಗೆ ಯಾವಾವ ರೀತಿಯಲ್ಲಿ ಉತ್ತರಹೇಳಬೇಕೋ ಅದನ್ನು ತಿಳು ಕೊಳ್ಳುವಿರಿ (ಕೊಲೊಸ್ಸೆ 4:6; ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆ ಪಡಿಸಿರಿ. ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ಧವಾಗಿರಿ; *ಆದರೆ ಅದನ್ನು ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ ಹೇಳಿರಿ* (1 ಪೇತ್ರ 3:15; ಒತ್ತಿ ಹೇಳಿದ್ದು ನನ್ನದು).

ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿ ಸುವದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು, … (2 ತಿಮೊಥೆ 2:24, 25).

*ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು* ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು, … (ಎಫೆಸ 4:15; ಒತ್ತಿ ಹೇಳಿದ್ದು ನನ್ನದು).

ನಾಯಕರು ಹೇಳುವಂಥದ್ದು ಮಾತ್ರವೇ ಮಹತ್ವದ ವಿಚಾರವಾಗಿರುವದಿಲ್ಲ; *ಅವರು ಹೇಗೆ ಹೇಳುತ್ತಾರೋ* ಎಂಬುದು ಸಹ ಮಹತ್ವದ್ದಾಗಿದೆ! ಸರಿಯಾಗಿ, ಸ್ಪಷ್ಟವಾಗಿ, ಒಪ್ಪಿಕೊಳ್ಳುವಂತೆ ಮತ್ತು ಪ್ರೀತಿಯಿಂದ ಮಾತಾಡುವದು ಒಂದು ಕೌಶಲ್ಯವಾಗಿದೆ.

*ನಾಯಕರು ಸಾಧ್ಯವಾದ ಪ್ರತಿಯೊಂದು ಸಾಧನವನ್ನು ಉಪಯೋಗಿಸಬೇಕು.* 1 ಕೊರಿಂಥ 9:19-23ರಲ್ಲಿ, ಪೌಲನು ಸಾಧ್ಯವಾದ ಅತೀ ಹೆಚ್ಚು ಪರಿಣಾಮಕಾರಿ ವಿಧಾನಗಳನ್ನು ಉಪಯೋಗಿಸಿದೆನೆಂದು ಹೇಳಿದ್ದಾನೆ:

ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು. ನಾನು ದೇವರ ನೇಮವಿಲ್ಲದವನಲ್ಲ, ಕ್ರಿಸ್ತನ ನಿಯಮಕ್ಕೊಳ ಗಾದವನೇ; ಆದರೂ ನಿಯಮವಿಲ್ಲದವರನ್ನು

> ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮವಿಲ್ಲದವನಂತಾದೆನು. ಬಲವಿಲ್ಲದವರನ್ನು ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ (1 ಕೊರಿಂಥ 9:20-22).

ಪೌಲನು "ಎಲ್ಲಾ ವಿಧಾನಗಳನ್ನು" ಉಪಯೋಗಿಸಿದ್ದರೆ, ಆಗ ಇಂದಿನ ಸಭೆಯ ನಾಯಕರೂ ಉಪಯೋಗಿಸತಕ್ಕದ್ದು,

*ನಾಯಕರು ಜಾಗರೂಕತೆಯಿಂದ ಕಟ್ಟತಕ್ಕದ್ದು.* 1 ಕೊರಿಂಥ 3:5-15ರಲ್ಲಿ, ಪೌಲ ಮತ್ತು ಅಪೊಲ್ಲೋಸನಂಥವರು ಕಟ್ಟುವವರು ಎಂದು ಪೌಲನು ಬೋಧಿಸಿದ್ದಾನೆ (ವಚನಗಳು 9, 10). ಕ್ರಿಸ್ತನು ಅಸ್ತಿವಾರವಾಗಿರುವದರಿಂದ ಸಭೆಯ ನಾಯಕರು ತಾವು ಯಾವ ಅಸ್ತಿವಾರದ ಮೇಲೆ ಕಟ್ಟಬೇಕೆಂದು ಆಯ್ಕೆಯಿಲ್ಲದವರಾಗಿದ್ದಾರೆ (ವಚನಗಳು 10, 11). ಸಭೆಯ ನಾಯಕರು ಈ ಎರಡು ರೀತಿಯಲ್ಲಿಯ ಒಂದು ತರದ ವಸ್ತುಗಳಿಂದ "ಕಟ್ಟಡವನ್ನು" ರಚಿಸಬಹುದು: (1) ಬಂಗಾರ, ಬೆಳ್ಳಿ, ಮತ್ತು ಅಮೂಲ್ಯವಾದ ರತ್ನಗಳಿಂದ ಇಲ್ಲವೇ (2) ಕಟ್ಟಿಗೆ, ಹುಲ್ಲು ಆಪು ಇವುಗಳಿಂದ (ವಚನ 12). ಕೆಲವೊಂದು ಮಟ್ಟಿಗೆ, ಕಟ್ಟುವವನು ಯಾವ ತರದ ವಸ್ತುಗಳನ್ನು ಕಟ್ಟಡದೊಳಗೆ ಹಾಕಬೇಕೆಂಬುದನ್ನು ತೀರ್ಮಾನಿಸುತ್ತಾನೆ. ಪ್ರತಿಯೊಬ್ಬ ಕಟ್ಟುವವನಿಗಾಗಿ ಮತ್ತು ಪ್ರತಿಯೊಂದು ಕಟ್ಟಡಕ್ಕಾಗಿ ಪರೀಕ್ಷೆಯ ಸಮಯವು ಬರುವುದು ಮತ್ತು ಕಟ್ಟುವವನ ಕೆಲಸವು ಬೆಂಕಿಯಿಂದ ಪರೀಕ್ಷಿಸಲ್ಪಡುವುದು ಎಂದು ಪೌಲನು ಹೇಳುತ್ತಾನೆ (ವಚನ 13). ಕಟ್ಟಿಗೆ, ಹುಲ್ಲು ಆಪು ಬೆಂಕಿಯಿಂದ ಸುಟ್ಟು ಹೋಗುವವು; ಬಂಗಾರ, ಬೆಳ್ಳಿ, ರತ್ನಗಳು ಉಳಿದುಕೊಳ್ಳುವವು. ಪೌಲನಿಂದ ವಿವರಿಸಲ್ಪಟ್ಟ ಈ ದಿನವು ಒತ್ತಡದ, ಹಿಂಸೆಯ, ಶೋಧನೆಯ ಸಮಯವಾಗಿರುವುದು. ಪ್ರತಿಯೊಂದು ಸಭೆಯು ಅಂತಿಮವಾಗಿ ಅಂಥ ಪರೀಕ್ಷೆಯ ಸಮಯಗಳನ್ನು ಅನುಭವಿಸುವುದು.

ಕಟ್ಟುವವನ ಕೆಲಸವು ಉಳಿದು ಕೊಂಡರೆ, ಅವನು ಬಹುಮಾನ ಹೊಂದುವನು (ವಚನ 14). ಕಾರ್ಮಿಕನು ಈ ಜೀವಿತದಲ್ಲಿ ತನ್ನ ಕಾರ್ಯವು ವ್ಯರ್ಥವಾಗಿ ಹೋಗಲಿಲ್ಲ - ತಾನು ಕಟ್ಟಲು ಕೆಲಸ ಮಾಡಿದ ದೇವಾಲಯವು ಉಳಿದು ಕೊಂಡಿದೆ, ಪ್ರಗತಿಯಲ್ಲಿದೆ ಎಂಬುದನ್ನು ತಿಳಿಯುವದಕ್ಕಿಂತ ಹೆಚ್ಚಾದ ಬಹುಮಾನವನ್ನು ಹೊಂದಿಕೊಳ್ಳುವನು, ಕೆಲಸವು ಉಳಿದು ಕೊಳ್ಳದಿದ್ದರೆ, ಕಟ್ಟುವವನು ಹಾನಿಯನ್ನು ಅನುಭವಿಸುವನು ಆದರೆ ರಕ್ಷಿಸಲ್ಪಡುವನು (ವಚನ 15). ಒಬ್ಬನು ಕಟ್ಟಲು ಸಹಾಯ ಮಾಡಿದ ದೇವಾಲಯವು ತೊಂದರೆಗಳ ಬಿರುಗಾಳಿಗಳನ್ನು ಸಹಿಸಿಕೊಳ್ಳಲಿಕ್ಕಾಗಲಿಲ್ಲ ಮತ್ತು ಇನ್ನೂ ಅಸ್ತಿತ್ವದಲ್ಲಿರುವದಿಲ್ಲ! ಎಂಬುದನ್ನು ತಿಳಿಯುವದರಿಂದ ಬರುವ ಹಾನಿಯ, ನಾಶನದ ಭಾವನೆಯನ್ನು ಕಲ್ಪಿಸಿಕೊಳ್ಳಿರಿ. ಹೀಗಿದ್ದರೂ, ಕಟ್ಟುವವನು ದೇವರ ಚಿತ್ತವನ್ನು ಮಾಡಲು ಹುಡುಕಿದ್ದರೆ, ಅವನು ಕಳೆದು ಹೋಗುವುದಿಲ್ಲ; ಅವನ ರಕ್ಷಣೆಯು ಅವನಿಂದ ಮಾರ್ಪಾಟುಹೊಂದಿದವರು ನಂಬಿಗಸ್ತಿಕೆಯಿಂದಿರುವದರ ಮೇಲೆ ಇಲ್ಲವೇ ಅವನು ಸ್ಥಾಪಿಸಿದ ಸಭೆಗಳ ಅಸ್ತಿತ್ವವು ಮುಂದುವರಿದಿರುವದರ ಮೇಲೆ ಅವಲಂಬಿಸಿರುವದಿಲ್ಲ.

ಹಾಗಾದರೆ, ಕಟ್ಟುವವನು - ಸಭೆಯ ನಾಯಕನು ಏನು ಮಾಡಬೇಕು? "ಪ್ರತಿಯೊಬ್ಬ ಕಟ್ಟುವವನು ಅದರ ಮೇಲೆ ಹೇಗೆ ಕಟ್ಟಬೇಕೆಂಬುದನ್ನು ಜಾಗರೂಕತೆಯಿಂದ ಆಯ್ದುಕೊಳ್ಳತಕ್ಕದ್ದು" ಇಲ್ಲವೇ "ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದನ್ನು ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು" (ವಚನ 10; KJV) ಜಾಗರೂಕತೆಯಿಂದ ಕಟ್ಟುವದಕ್ಕೆ ಆಹ್ವಾನವು ಕೌಶಲ್ಯದಿಂದ ಕೆಲಸ ಮಾಡುವದಕ್ಕೆ ಆಹ್ವಾನವಾಗಿದೆ! ಸಭೆಯ ನಾಯಕರು ನಾಯಕತ್ವದೊಂದಿಗೆ ಸಂಬಂಧಿಸಿದ ಕೌಶಲ್ಯಗಳನ್ನು ಕಲಿಯುವ ಅಗತ್ಯತೆಯಿದೆ.

## ಕೌಶಲ್ಯಗಳನ್ನು ಬೆಳಿಸಿಕೊಳ್ಳುವುದು

ಸಭೆಯ ನಾಯಕರು ಇತರರೊಂದಿಗೆ ಹೊಂದಿಕೊಂಡು ಹೋಗುವುದನ್ನು ಕಲಿತು ಕೊಳ್ಳುವ ಅಗತ್ಯತೆಯಿದೆ. ಅವರು ಹಿಡಿದುಕೊಂಡಿರುವ "ಹುದ್ದೆಗೆ" ಅವರು ಅರ್ಹರಾಗಿದ್ದರೂ, ತಮ್ಮ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಲು ಅವರು "ಜನರ ಕೌಶಲ್ಯಗಳನ್ನು" ಕಲಿತು ಕೊಳ್ಳುವ ಅಗತ್ಯತೆಯಿದೆ. ಪದೇ ಪದೇ ಸಭೆಯಲ್ಲಿ ಸಮಸ್ಯೆಗಳಿಗೆ ಕಾರಣವಾಗುವಂಥದ್ದು, ಸರಿಯಾದ ಇಲ್ಲವೇ ತಪ್ಪಾದ ನಡತೆಯ ಪ್ರಶ್ನೆಗಳಲ್ಲ, ಆದರೆ ಜನರಲ್ಲಿರುವ ಭಿನ್ನತೆಗಳಾಗಿದೆ. ಇದಲ್ಲದೆ ಒಬ್ಬ ನಾಯಕನು ಲೌಕಿಕವಾಗಿ ಒಬ್ಬ ನೀತಿವಂತ ವ್ಯಕ್ತಿಯಾಗಿರಬಹುದು, ಮತ್ತು ಬೋಧನೆಗನುಗುಣವಾಗಿ ಸರಿಯಾದವನಾಗಿರ ಬಹುದು ಮತ್ತು ಅವನು ಜನರೊಂದಿಗೆ ಸಂಬಂಧಿಸುವ ಸಾಮರ್ಥ್ಯದ ಕೊರತೆಯುಳ್ಳವನಾಗಿದ್ದರೆ ಪರಿಣಾಮಕಾರಿಯಾಗದ ನಾಯಕನಾಗಿರುವನು.

ಸಭೆಯ ನಾಯಕನು ಒಳ್ಳೆ ವೈಯಕ್ತಿಕ ಸಂಬಂಧಗಳ ಕೌಶಲ್ಯಗಳನ್ನು ಹೇಗೆ ಬೆಳಿಸಿಕೊಳ್ಳಬೇಕು?

### ಎಲ್ಲಾ ಜನರಲ್ಲಿ ಆಸಕ್ತಿಯುಳ್ಳವನಾಗಿರುವುದು

ಸಭೆಯ ನಾಯಕರು "ಜನರ ವ್ಯವಹಾರದಲ್ಲಿ" ಇರುವವರು. ಈ ಲೇಖನದಲ್ಲಿ ಉದಾಹರಿಸಲ್ಪಟ್ಟಂತೆ, ಅವರು ಸಭೆಯಲ್ಲಿಯ ಇತರರಲ್ಲಿ ಮತ್ತು ಅದರ ಹೊರಗಿರುವವರಲ್ಲಿ ಆಳವಾಗಿ ಆಸಕ್ತರಾಗಿರತಕ್ಕದ್ದು:

> "ನೀನು ಎಷ್ಟು ಚಿಂತಿಸುತ್ತೀ ಎಂಬುದನ್ನು ತಿಳಿಯುವವರೆಗೆ ಯಾರೂ ನಿನ್ನನ್ನು ಗಮನಿಸುವದಿಲ್ಲ." ... ನಾವು ಬಹಳ ಸಲ ಜ್ಞಾನದಲ್ಲಿ ಉದ್ಧವಾದವರೂ ದಯೆಯಲ್ಲಿ ಚಿಕ್ಕದಾದವರೂ, ತತ್ವದ ಮೇಲೆ ಸರಿಯಾದವರೂ ಸ್ವಭಾವದಲ್ಲಿ ಮನನೋಯಿಸುವವರೂ ಆಗಿರುತ್ತೇವೆ. ಯೇಸುವು ಬಸ್ಸುಗಳಿಗಾಗಿ, ಬಜೆಟ್‌ಗಳಿಗಾಗಿ ಮತ್ತು ಕಟ್ಟಡಗಳಿಗಾಗಿ; ಕಾರ್ಪೆಟಗಳಿಗಾಗಿ, ತಂಪುಗೊಳಿಸುವುದಕ್ಕಾಗಿ ಮತ್ತು ಸಮಿತಿಗಳಿಗಾಗಿ ಸಾಯಲಿಲ್ಲ ಎಂದು ಜ್ಞಾಪಿಸಿಕೊಳ್ಳುವದರಿಂದ ನಾವು ಚೆನ್ನಾಗಿ ಮಾಡುತ್ತೇವೆ. ಆತನು ಜನರಿಗಾಗಿ ಮರಣ ಹೊಂದಿದನು!
>
> ಜನರೊಂದಿಗೆ ಕಾರ್ಯಮಾಡಲು ಕೆಲವೊಂದು ಸಾಮಾನ್ಯ ಅರ್ಥದ ನಿಯಮಗಳು ಇಲ್ಲಿವೆ:
>
> 1. ಜನರೊಂದಿಗೆ ಮಾತಾಡು! ಸಂತೋಷದ ಮಾತಿನ ವಂದನೆಯಷ್ಟು ಉತ್ತಮವಾದದ್ದು ಬೇರಾವುದೂ ಇಲ್ಲ!
>
> 2. ಜನರ ಕಡೆ ಮುಗುಳ್ನಗು! ಮುಗುಳ್ನಗೆಯು ಅಂತರ್ ರಾಷ್ಟ್ರೀಯ ಭಾಷೆಯಾಗಿದೆ. ಹುಬ್ಬುಗಂಟಿಕ್ಕಲು 72 ಸ್ನಾಯುಗಳನ್ನು ತೆಗೆದು ಕೊಳ್ಳುತ್ತದೆ, ಆದರೆ ಮುಗುಳ್ನಗಲು 14 ಸ್ನಾಯುಗಳನ್ನು ತೆಗೆದು ಕೊಳ್ಳುತ್ತದೆ. ಮತ್ತು ಅದು ಲಾಭಗಳನ್ನು ಕೊಡುತ್ತದೆ!
>
> 3. ಜನರನ್ನು ಹೆಸರಿನಿಂದ ಕರೆಯಿರಿ! "ಸ್ನೇಹಿತರನ್ನು ಹೆಸರಿನಿಂದ ವಂದಿಸಿರಿ" (3 ಯೋಹಾನ 15).
>
> 4. ಸ್ನೇಹಪರರೂ ಸಹಾಯವುಳ್ಳವರೂ ಆಗಿರ್ರಿ! ಸ್ನೇಹಿತರುಗಳನ್ನು ಹೊಂದಿರಲು ಅತ್ಯುತ್ತಮವಾದ ಮಾರ್ಗವು ಒಬ್ಬ ಒಳ್ಳೆಯ ಸ್ನೇಹಿತನಾಗಿರುವುದು. ಯೇಸುವು "ಪಾಪಿಗಳ ಸ್ನೇಹಿತನು" ಆಗಿದ್ದನು (ಲೂಕ 7:34).
>
> 5. ನಿನ್ನ ಪ್ರೀತಿಗೆ ಶರತ್ತುಗಳನ್ನು ಹಾಕಬೇಡ! "ನೀನು ... ಆದರೆ ನಾನು ನಿನ್ನನ್ನು ಪ್ರೀತಿಸುವೆನು" ಎಂಬುದಿರಬಾರದು. ಯೇಸುವು ಪ್ರೀತಿಸಿದನು "ಯಾಕೆಂದರೆ" [ಪ್ರತಿಯೊಬ್ಬ ವ್ಯಕ್ತಿಯು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿದ್ದಾನೆ ಮತ್ತು ದೇವರಿಂದ ಪ್ರೀತಿಸಲ್ಪಟ್ಟಿದ್ದಾನೆ] ಮತ್ತು "ಹೀಗಿದ್ದರೂ" [ವ್ಯಕ್ತಿಯ ಪಾಪಗಳು ಮತ್ತು ಬಲಹೀನತೆಗಳು].

> 6. ಜನರಲ್ಲಿ ಯಥಾರ್ಥವಾಗಿಯೂ ಆಸಕ್ತಿಯುಳ್ಳವರಾಗಿರಿ! ಅವರು ಇರುವರು ಎಂದು ನೀನು ಜ್ಞಾಪಿಸಿಕೊಂಡರೆ, ಜನರು ಕೆಲವೊಂದಕ್ಕೆ ನಿಜವಾಗಿಯೂ ಯೋಗ್ಯರಾಗಿರುವರೆಂದು ನೀನು ನಡಿಸಿಕೊಳ್ಳಲು ಸುಲಭವಾಗುತ್ತದೆ!
>
> 7. ಹೊಗಳುವದರಲ್ಲಿ ಉದಾರಿಯಾಗಿರು! ನೀನು ಅಕ್ಷರಶಃವಾಗಿ "ಜನರನ್ನು ಘನತೆಯಲ್ಲಿ ಹೊಗಳಬಹುದು." ...
>
> 8. ಇತರರ ಭಾವನೆಗಳಿಗೆ ಗೌರವ ಕೊಡುವವನಾಗಿರು. ಸುವರ್ಣ ನಿಯಮವು ಅನ್ವಯಿಸುತ್ತದೆ: "ಇತರರು ನಿನಗೆ ಮಾಡುವಂತೆ ನೀನು ಇತರರಿಗೆ ಮಾಡು."
>
> 9. ಇತರರ ಅಭಿಪ್ರಾಯಗಳಿಗೆ ಯೋಚನಾಪರನಾಗಿರು! ಚರ್ಚೆಗೆ ಮೂರು ಪಕ್ಕಗಳಿರುವವು - ನಿನ್ನದು, ಇತರ ವ್ಯಕ್ತಿಯದು ಮತ್ತು ಸರಿಯಾದ ಭಾಗದ್ದು!
>
> 10. ಸೇವೆಗೆ ಸಿದ್ಧನಾಗಿರು! "ಸೇವಕರು," "ಕೊಡುವವರು" "ದೊಡ್ಡಸ್ತಿಕೆ"ಯ ಮಾರ್ಗದ ಮೇಲಿದ್ದಾರೆ (ಮತ್ತಾಯ 20:26). ...
>
> ಸಿದ್ಧಾಂತಪರವಾಗಿ ಸರಿಯಾಗಿರುವ ನಮ್ಮ ಪ್ರಯತ್ನಗಳಲ್ಲಿ, ಸಾಂಘಿಕವಾಗಿ ಬಲವಿರುವಲ್ಲಿ, ಮತ್ತು ಸೇವೆ ಸಮೃದ್ಧವಾಗಿರುವಲ್ಲಿ, ಜಗತ್ತಿನಲ್ಲಿ ಅತೀ ಅಮೂಲ್ಯ ಸರಕಾಗಿರುವ "ಜನರೊಂದಿಗೆ" ನಾವು ಕೆಲಸ ಮಾಡುತ್ತೇವೆ ಎಂಬುದನ್ನು ಮರೆಯದಿರೋಣ. ಜಾಗರೂಕತೆಯಿಂದ ನಡಿಸಿಕೊಳ್ಳಿರಿ ... *ಪ್ರಾರ್ಥನೆಯಿಂದ ನಡಿಸಿಕೊಳ್ಳಿರಿ.*[2]

ಸಭಾ ನಾಯಕರು ಆ ಬಜೆಟ್ ಮತ್ತು ಅಂಕಿ ಸಂಖ್ಯೆಗಳು ಪ್ರತಿನಿಧೀಕರಿಸುವ ಜನರನ್ನು ಮರೆತು ಬಿಡುವಷ್ಟರ ಮಟ್ಟಿಗೆ ಬಜೆಟ್ಟುಗಳ ಮತ್ತು ಅಂಕಿ ಸಂಖ್ಯೆಗಳ ಬಗ್ಗೆ ಆಸಕ್ತರಾಗಿರುವರು. ಸಭೆಯ ನಾಯಕರು "ಜನರ ವ್ಯವಹಾರದಲ್ಲಿ" ಇರುವವರಾಗಿದ್ದಾರೆ.

**ತಮ್ಮನ್ನು ತಾವೇ ಸುಧಾರಿಸಿಕೊಳ್ಳುವುದು**

ಬಹುಶಃ, ಇತರರೊಂದಿಗೆ ಹೊಂದಿಕೊಂಡು ಹೋಗುವಲ್ಲಿ ಸಭೆಯ ನಾಯಕರ ಅತೀ ಕೆಟ್ಟ ವೈರಿಯು ತಾವೇ ಆಗಿದ್ದಾರೆ. "ಸಹೋದರ ಜೋನ್ಸ್‌ನು ಬದಲಾವಣೆ ಹೊಂದಿದರೆ ನಾನು ಅವನೊಂದಿಗೆ ಚೆನ್ನಾಗಿ ಹೊಂದಿಕೊಂಡು ಹೋಗುವೆನು" ಎಂದು ಜನರು ಯೋಚಿಸುವ ಕಡೆಗೆ ಹೊಂದಿಕೊಂಡಿರುತ್ತಾರೆ, ನಾಯಕರು ತಾವು ಜೊನ್ಸ್‌ನೊಂದಿಗೆ ಮತ್ತು ಇತರ ಪ್ರತಿಯೊಬ್ಬರೊಂದಿಗೆ - ಹೊಂದಿಕೊಂಡು ಹೋಗಬೇಕಾದರೆ ತಮ್ಮಲ್ಲಿ ತಾವೇ ಬದಲಾಗುವಲ್ಲಿ ತಮಗೆ ನಿರೀಕ್ಷೆಯಿರುವಲ್ಲಿ ಇರುವದೆಂದು ಗುರುತಿಸುವ ಅಗತ್ಯತೆಯಿದೆ. ಅಗತ್ಯವಾದ ಬದಲಾವಣೆಗಳನ್ನು ಮಾಡಲು ನಾಯಕರು ಎರಡು ಸಂಗತಿಗಳನ್ನು ಮಾಡುವ ಅಗತ್ಯತೆ ಇರುತ್ತದೆ:

(1) *ಅವರು "ತಮ್ಮಷ್ಟಕ್ಕೆ ತಾವೇ" ಇರುವದನ್ನು ನಿರ್ಣಯಿಸಿಕೊಳ್ಳಬೇಕು.* ಯಾವನೂ ಸಂಪೂರ್ಣವಾಗಿ ಇನ್ನೊಬ್ಬನನ್ನು ಅನುಕರಿಸಬಾರದು. ಬೆರಳಚ್ಚುಗಳಂತೆ ನಾಯಕರು ಎಲ್ಲರೂ ವ್ಯಕ್ತಿಗಳಾಗಿರುತ್ತಾರೆ. ಅವರಿಲ್ಲದಂಥದ್ದಾಗಿರಲು (ಉದಾಹರಣೆ ಅಂತರ್ಮುಖಿಯು ಅತಿಶಯವಾಗಿ ಬಹಿರ್ಮುಖಿಯಾಗಿರುವಂತೆ) ಪ್ರಯತ್ನಿಸುವುದು ಅವರು ಯಥಾರ್ಥರಾಗಿಲ್ಲದವರಂತೆ ಕಾಣಿಸಿಕೊಳ್ಳುತ್ತಾರೆ. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಪೌಲ, ಪೇತ್ರ, ಬಾರ್ನಬ, ಅಂದ್ರೇಯ ಮತ್ತು ತೋಮನು - ಎಲ್ಲರೂ ಒಬ್ಬರಿಗಿಂತ ಒಬ್ಬರು ಭಿನ್ನವಾಗಿದ್ದರು, ಆದರೆ ಎಲ್ಲರೂ ದೇವರನ್ನು ಮೆಚ್ಚಿಸುವವರಾಗಿರಬೇಕು. ಇಂದು ಆತನನ್ನು ಮೆಚ್ಚಿಸಲಿಕ್ಕೆ ಎಲ್ಲರೂ ಒಂದೇ ರೀತಿಯಾಗಿರಬೇಕು ಎಂದು ನಾಯಕರು ಯೋಚಿಸುವ ಅಗತ್ಯತೆಯಿರುವದಿಲ್ಲ.

(2) *ಅವರು "ತಮ್ಮ ಅತ್ಯುತ್ತಮ ತಾವಾಗಿರಬೇಕು."* ವ್ಯಕ್ತಿತ್ವದ ಮೇರೆಗಳೊಳಗೆ, "ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವದನ್ನು" (ಎಫೆಸ 4:13) ಸಾಧಿಸುವದಕ್ಕೆ ಹುಡುಕುವಲ್ಲಿ ಯಾವಾಗಲೂ ಸುಧಾರಿಸಲಿಕ್ಕೆ ಅವಕಾಶವಿರುವುದು. ಸುಧಾರಿಸಲಿಕ್ಕೆ

ಅತ್ಯುತ್ತಮವಾದ ಮಾರ್ಗವು ಕ್ರೈಸ್ತ ಸದ್ಗುಣಗಳನ್ನು ಬೆಳೆಸಿಕೊಳ್ಳುವುದಾಗಿದೆ. 1 ಕೊರಿಂಥ 13:4-7, ಗಲಾತ್ಯ 5:22, 23, ಇಲ್ಲವೇ 2 ಪೇತ್ರ 1:5-7ರಲ್ಲಿ ಹೇಳಿದ ಗುಣಲಕ್ಷಣಗಳು ನಾಯಕನಲ್ಲಿದ್ದರೆ, ಇತರರು ಅವನನ್ನು ಇಷ್ಟಪಡುವದಕ್ಕೆ ಮತ್ತು ಹಿಂಬಾಲಿಸಲಿಕ್ಕೆ ಸುಲಭ ವಾಗಿ ಕಂಡು ಕೊಳ್ಳುವರು. ಕೆಲವು ಸಲ ಸರಳವಾದ ವ್ಯಕ್ತಿತ್ವದ ಲಕ್ಷಣ ಎಂಬಂತೆ ಯೋಚಿಸಲ್ಪಡುವುದು ಒಂದು ಗುಣಲಕ್ಷಣದ ನ್ಯೂನತೆಯನ್ನು ಪ್ರಕಟಿಸಬಹುದು. ಉದಾಹರಣೆಯಾಗಿ, "ನನ್ನ ವ್ಯಕ್ತಿತ್ವವು ಇತರರನ್ನು ವಂದಿಸಲು ಬಿಡುವದಿಲ್ಲ ಇಲ್ಲವೇ ಅವರ ಕ್ಷೇಮಾಭಿವೃದ್ಧಿಯ ಬಗ್ಗೆ ವಿಚಾರಿಸಲಿಕ್ಕೆ ಅಥವಾ ಅವರ ತೊಂದರೆಗಳ ಬಗ್ಗೆ ಕೇಳಲಿಕ್ಕೆ ಬಿಡುವದಿಲ್ಲ" ಎಂದು ಒಬ್ಬನು ಹೇಳಿದರೆ, ಅವನ ಸಮಸ್ಯೆಯು ಅವನ ವ್ಯಕ್ತಿತ್ವವಾಗಿರುವದಿಲ್ಲ ಆದರೆ ಜೋಪಾಸನೆ ಮಾಡಲು ಮತ್ತು ಪ್ರೀತಿಸಲು ಅವನಿಗೆ ಮನಸ್ಸಿಲ್ಲದೇ ಇರುವುದು ಆಗಿರುತ್ತದೆ.

**ಇತರರೊಂದಿಗೆ ಸಂಬಂಧಿಸುವುದು**

"ಕುರುಬನ ಒಂದು ವಿಶೇಷ ಗುಣಲಕ್ಷಣವು ಅವನು ಕುರಿಗಳೊಂದಿಗೆ ವಾಸಿಸುವುದು; ಅವನು ಅವುಗಳ ಹಾಗೆ ವಾಸನೆಯುಳ್ಳವನಾಗುವವರೆಗೆ ಅವನು ಅವುಗಳೊಂದಿಗೆ ವಾಸಿಸುತ್ತಾನೆ" ಎಂದು ಒಬ್ಬ ಮನುಷ್ಯನು ಹೇಳಿದನು. ಸಭೆಯ ನಾಯಕರು ತಾವು ನಡಿಸುವವರೊಂದಿಗೆ ಸಮಯ ಕಳೆ ಯತಕ್ಕದ್ದು. ಕುರಿಗಳೊಂದಿಗೆ ಎಂದಿಗೂ ಇರದೇ ಒಬ್ಬನು ನಿಜವಾಗಿಯೂ ದೇವರ ಮಂದೆಯನ್ನು ಕಾಯುವದನ್ನು ಕಲ್ಪಿಸುವುದು ಕಠಿಣವಾದದ್ದಾಗುತ್ತದೆ. ಸಭೆಯ ನಾಯಕನು ಸತತವಾಗಿ ಸದಸ್ಯರೊಂದಿಗೆ ಇದ್ದರೆ ಎರಡು ಪರಿಣಾಮಗಳು ಆಗುತ್ತವೆ.

*ಮೊದಲನೆಯದು, ಅವನು ಸಭೆಯನ್ನು ಚೆನ್ನಾಗಿ ತಿಳಿದು ಕೊಳ್ಳುವವನಾಗುವನು.* ಸಭೆಯವರನ್ನು ಸಾಕಷ್ಟು ತಿಳಿದು ಕೊಳ್ಳುವಷ್ಟು ಸಮಯದವರೆಗೆ ಅವರೊಂದಿಗೆ ಇಲ್ಲದಿದ್ದರೆ ನಾಯಕನು ಸಭೆಯನ್ನು ಹೇಗೆ ನಡಿಸಿಕೊಳ್ಳಬೇಕೆಂಬುದನ್ನು ಮತ್ತು ಅವರ ಅಗತ್ಯತೆಗಳು ಯಾವವು ಎಂಬುದನ್ನು ತಿಳಿಯಲಾರನು. ಅವರನ್ನು ಅವರ ಹೆಸರಿನಿಂದ ತಿಳಿಯುವವರೆಗೆ ಮತ್ತು ಅವರ ವೈಯಕ್ತಿಕ ಚರಿತ್ರೆಯನ್ನು ತಿಳಿಯುವವರೆಗೆ ಮತ್ತು ವ್ಯಕ್ತಿವ್ಯಕ್ತಿಗಳ ಸಮಸ್ಯೆಗಳನ್ನು ಅರಿತು ಕೊಳ್ಳುವವರೆಗೆ ಅವನು ಅವರನ್ನು ನಡಿಸುವ ಹಕ್ಕನ್ನು ಹೊಂದಿಕೊಂಡಿರುವದಿಲ್ಲ ಎಂದು ಹೇಳಬಹುದು.

*ಎರಡನೆಯದು, ಮತ್ತು ಬಹುಶಃ ಹೆಚ್ಚು ಮಹತ್ವವುಳ್ಳದ್ದು, ಅವರು ತನ್ನನ್ನು ತಿಳಿದುಕೊಳ್ಳಲು ಅವನು ಬಿಡುವನು.* ಕುರುಬನನ್ನು ಚೆನ್ನಾಗಿ ತಿಳಿದಿದ್ದರೆ ಮಾತ್ರವೇ ಕುರಿಗಳು ಸಂತೋಷದಿಂದ ಹಿಂಬಾಲಿಸುವವು. ಆದುದರಿಂದ ನಾಯಕರು ತಮ್ಮನ್ನು ಇತರರಿಗೆ ತೆರೆದಿಡಲು ಸಿದ್ಧರಾಗಿರಬೇಕು. ಸಭೆಯ ನಾಯಕರು ಇದನ್ನು ಮಾಡಲಿಕ್ಕೆ ಸಿದ್ಧರಾಗಿರಲಿಕ್ಕಿಲ್ಲ. ಅವರು ಆದರ್ಶದಿಂದ ನಡಿಸತಕ್ಕದ್ದೆಂದು ಅವರು ತಿಳಿದಿರಬೇಕು. ತಾವು ಪರಿಪೂರ್ಣರಾಗಿರುವದಿಲ್ಲವೆಂಬುದನ್ನೂ ಅವರು ತಿಳಿದಿರುವರು, ತಮ್ಮ ಅಪರಿಪೂರ್ಣತೆಗಳನ್ನು ಇತರರು ಕಂಡು ಹಿಡಿದರೆ, ಸಭೆಯು ತಮ್ಮನ್ನು ಕಪಟಿಗಳೆಂದು ದ್ವೇಷಿಸುವುದು, ಅವರ ಗೌರವವು ಕಳೆದು ಹೋಗುವುದು, ಮತ್ತು ಸದಸ್ಯರು ತಮ್ಮನ್ನು ಹಿಂಬಾಲಿಸುವದನ್ನು ನಿರಾಕರಿಸುವರು ಎಂದು ಅವರು ಆಗಾಗ ಭಯಪಡುತ್ತಾರೆ, ಹೀಗಿದ್ದರೂ, "ನಿಜವಾದ ನಿನ್ನನ್ನು" ಜನರು ತಿಳಿಯುವಂತೆ ಬಿಡುವುದು ಗಂಡಾಂತರ ತೆಗೆದು ಕೊಳ್ಳುವುದಕ್ಕೆ ಯೋಗ್ಯವಾದದ್ದಾಗಿದೆ. ತಮ್ಮನ್ನು ತಿಳಿಯಲ್ಪಡಲು ಬಿಡುವ ನಾಯಕರನ್ನು ಸಭೆಯ ಸದಸ್ಯರು ಮೆಚ್ಚಿಕೊಳ್ಳುತ್ತಾರೆ.

**ಇತರರಿಗಾಗಿ ಆಸಕ್ತಿಯನ್ನೂ ಚಿಂತನೆಯನ್ನೂ ತೋರಿಸುವುದು**

ಅನೇಕ "ಮಾನವ ಸಂಬಂಧಗಳ ನಿಯಮಗಳಿಗೆ" ಬೆಲೆಯಿರುವಾಗ, ವೈಯಕ್ತಿಕ

ಸಂಬಂಧಗಳ ಮೇಲೆ ಅತ್ಯುತ್ತಮ "ನಿಯಮ ಪುಸ್ತಕ"ವು ಬೈಬಲ್ ಆಗಿರುತ್ತದೆ. ನಾಯಕರು ಪ್ರೀತಿಸುವವರೂ, ದಯೆಯುಳ್ಳವರೂ, ಸ್ವಾರ್ಥರಹಿತ ಸೇವಕರೂ ಪ್ರೀತಿಸುವವರೂ, ದಯೆಯುಳ್ಳವರೂ, ಸ್ವಾರ್ಥರಹಿತ ಸೇವಕರೂ ಆಗಿದ್ದರೆ ಅವರು ಬಹುಶಃ ಇತರರೊಂದಿಗೆ ಹೊಂದಿಕೊಂಡು ಹೋಗಬಹುದು. ಬಹುಶಃ ಅತೀ ಮಹತ್ವದ ಬುದ್ಧಿವಾದವು "ನಿನಗೆ ಆಸಕ್ತಿಯನ್ನು ತೋರಿಸುವುದು" ಆಗಿರುತ್ತದೆ. ಸಭೆಯ ನಾಯಕರು ತಮ್ಮ ಮಂದೆಯನ್ನು ಪ್ರೀತಿಸುವರು, ಆದರೆ ಕೆಲವು ಸಲ ಅವರು ಎಂದೂ ತಮ್ಮ ಪ್ರೀತಿಯನ್ನು ತೋರಿಸುವದಿಲ್ಲ ಇಲ್ಲವೇ ವ್ಯಕ್ತಪಡಿಸುವದಿಲ್ಲ. ಪ್ರೀತಿಯು ಪ್ರದರ್ಶಿಸಲ್ಪಡದಿದ್ದರೆ ಅದು ಗ್ರಹಿಸಲ್ಪಡುವದಿಲ್ಲ ಇಲ್ಲವೇ ಮೆಚ್ಚಿಸಲ್ಪಡುವದಿಲ್ಲ. *Action* ಎಂಬ ನಿಯತಕಾಲಿಕದಿಂದ "The Hawthorne Effect" ಎಂದು ಕರೆಯಲ್ಪಡುವ ಲೇಖನದಲ್ಲಿ ಕೆಳಗಿನ ಉದಾಹರಣೆಯು ಉಪಯೋಗಿಸಲ್ಪಟ್ಟಿದೆ:

> ತಮ್ಮ ಕಾರ್ಯ ಉತ್ಪಾದನೆಯ ಮೇಲೆ ವಿವಿಧ ರೀತಿಯ ಪರಿಣಾಮಗಳನ್ನು ಪರೀಕ್ಷಿಸುವದಕ್ಕಾಗಿ ಒಂದು ದೊಡ್ಡ ಫ್ಯಾಕ್ಟರಿಯಲ್ಲಿ ಒಂದು ಡಿಪಾರ್ಟ್‌ಮೆಂಟಿನಿಂದ ಆರು ಜನ ಮಹಿಳೆಯರು ಆಯ್ಕೆ ಮಾಡಲ್ಪಟ್ಟರು. ತಮ್ಮ ಕೆಲಸ ಮಾಡುವ ಪರಿಸ್ಥಿತಿಗಳಲ್ಲಿ ಒಂದು ಸಲಕ್ಕೆ ಒಂದರಂತೆ ಹತ್ತು ವಿಶೇಷ ಬದಲಾವಣೆಗಳು ಮಾಡಲ್ಪಟ್ಟವು. ಕಂಪನಿಗೆ ಆಶ್ಚರ್ಯವಾಗುವಂತೆ ಪ್ರತಿಯೊಂದು ಬದಲಾವಣೆಯೊಂದಿಗೆ, ಬದಲಾವಣೆಯ ಸ್ವಭಾವವನ್ನು ಗಣನೆಗೆ ತೆಗೆದು ಕೊಳ್ಳದೇ, ಅದು ಮೊದಲಿನ ಪರಿಸ್ಥಿತಿಗೆ ಸಂಬಂಧಿಸಿದ್ದಾಗಿದ್ದರೂ, ಕಾರ್ಯ ಉತ್ಪಾದನೆಯು ಸುಧಾರಿಸಲ್ಪಟ್ಟಿತು.
>
> ಅಂಥ ಪರಿಸ್ಥಿತಿಯು ಆ ರೀತಿಯಲ್ಲಿ ಹೇಗೆ ಕಾರ್ಯಮಾಡಲಾಗಿತ್ತು? ಯಾಕೆ ಎಂಬುದಕ್ಕೆ ನಾಲ್ಕು ಕಾರಣಗಳು ನಿರ್ಧರಿಸಲ್ಪಟ್ಟವು: (1) ಅವರು ಒಂದು ರೀತಿಯಲ್ಲಿ ವಿಶೇಷವಾದವರಾಗಿದ್ದಾರೆ ಎಂಬುದಾಗಿ ಅವರು ಭಾವಿಸುವಂತೆ ಮಾಡಲ್ಪಟ್ಟರು. (2) ಅವರು ಪ್ರತ್ಯೇಕವಾಗಿ ಚೆನ್ನಾಗಿ ನಡಿಸಲ್ಪಟ್ಟರು. (3) ಅವರಿಗೆ ಬಹಳವಾದ ಗಮನವು ಕೊಡಲ್ಪಟ್ಟಿತು. (4) ತಮ್ಮ ಸ್ವಂತ ಲಾಭಕ್ಕಾಗಿ ಬದಲಾವಣೆಗಳು ಮಾಡಲ್ಪಟ್ಟವು ಎಂಬ ಅರುಹು ಅವರಿಗಿತ್ತು.

ಜನರು ತಾವು "ಒಂದು ರೀತಿಯಲ್ಲಿ ವಿಶೇಷವಾದವರು" ಮತ್ತು "ಪ್ರತ್ಯೇಕವಾಗಿ ನಡಿಸಿಕೊಳ್ಳಲ್ಪಡುವವರು" ಎಂಬುದನ್ನು ಗ್ರಹಿಸಿಕೊಂಡಾಗ, "ಬಹಳವಾಗಿ ಗಮನವು" ಕೊಡಲ್ಪಟ್ಟಾಗ, ಮತ್ತು ತಮ್ಮ ನಾಯಕರಿಗೆ ಅವರ ಹೃದಯದಲ್ಲಿ ಆಸಕ್ತಿಯಿದೆಯೆಂದು ಅರಿತು ಕೊಳ್ಳುವಾಗ, ಅಲ್ಪವಾದ ಇಲ್ಲವೇ ಬೇಧಭಾವವಿಲ್ಲದ ಬದಲಾವಣೆಗಳೂ ಸಹ ತಾವು ಮಾಡುತ್ತಿರುವಂಥದ್ದನ್ನು ಇನ್ನೂ ಹೆಚ್ಚು ಕಠಿಣವಾಗಿ ಕಾರ್ಯಮಾಡುವಂತೆ ಪ್ರೋತ್ಸಾಹಿಸುವವು! ಈ ಪಾಠವನ್ನು ವ್ಯಾಪಾರಿಗಳು, ಶಾಲೆಗಳು, ದಂಪತಿಗಳು, ತಂದೆ ತಾಯಿಗಳು ಮತ್ತು ಸಭೆಯ ನಾಯಕರು ಕಲಿತು ಕೊಳ್ಳುವ ಅಗತ್ಯತೆಯಿದೆ!

ಈ ಬುದ್ಧಿವಾದದ ಮತ್ತು ಡೇಲ್ ಕಾರ್ನೀಜ್ ಮತ್ತು ಇತರರಿಂದ "ಸ್ನೇಹಿತರನ್ನು ಗೆದ್ದುಕೊಳ್ಳುವುದು ಮತ್ತು ಜನರ ಮೇಲೆ ಪ್ರಭಾವ ಬೀರುವುದು ಹೇಗೆ"? ಎಂಬುದರ ಮೇಲೆ ಕೊಡಲ್ಪಟ್ಟ ಬುದ್ಧಿವಾದದ ಮಧ್ಯದಲ್ಲಿ ಯಾವ ಭಿನ್ನತೆಯಾದರೂ ಇದೆಯೋ? *ಉದ್ದೇಶದಲ್ಲಿ ಭಿನ್ನತೆಯಿರುತ್ತದೆ: ಸಭೆಯ ನಾಯಕರು ಜನರನ್ನು ಸರಿಯಾಗಿ ನಡಿಸಿಕೊಳ್ಳುತ್ತಾರೆ ಯಾಕೆಂದರೆ ಹಾಗೆ ಮಾಡುವುದು ಸರಿಯಾದದ್ದಾಗಿದೆ. ಅವರು ಅವರ ಮೇಲೆ ನಿಯಂತ್ರಣ ಸಾಧಿಸುವದಕ್ಕಾಗಿ ಅಲ್ಲ - ಅವರಿಂದ ಲಾಭ ಪಡೆಯುವದಕ್ಕಾಗಿಯೂ ಅಲ್ಲ.* ನಾಯಕರ ಗುರಿಯು, ತಮ್ಮ ಸ್ವಂತದ್ದಲ್ಲ, ಆದರೆ ಇತರರ ಒಳತಿಗಾಗಿ ಇರುವುದು. ಕ್ರೈಸ್ತರು ತಾವು ಯೇಸುವಿನ ಆದರ್ಶವನ್ನು ಅನುಸರಿಸುವದಕ್ಕಾಗಿ ಇತರರಿಗೆ ಒಳ್ಳೆಯದನ್ನು ಮಾಡುವರು (ಅಪೊಸ್ತಲರ ಕೃತ್ಯಗಳು 10:38), ಅವರು ರಕ್ಷಿಸಲ್ಪಡಲಿಕ್ಕಾಗುವಂತೆ, ಮತ್ತು ಕರ್ತನ ಕಾರಣವು ವೃದ್ಧಿಗೊಳ್ಳಲಿಕ್ಕಾಗುವಂತೆ ಹಾಗೂ ಸಭೆಯು ಬೆಳೆಯಲಿಕ್ಕಾಗುವಂತೆ ಹಾಗೆ

ಮಾಡುವರು. ಕ್ರೈಸ್ತರು ತಮಗಾಗಿ ಹೆಸರನ್ನು ಮಾಡಿಕೊಳ್ಳುವದಕ್ಕಾಗಿ ಇಲ್ಲವೇ ಯಾರಿಗಾದರೂ ಲಾಭ ಮಾಡುವದಕ್ಕಾಗಲೀ ಒಳ್ಳೆಯದನ್ನು ಮಾಡುವದಿಲ್ಲ!

**ಇತರರೊಂದಿಗೆ ಹೊಂದಿಕೊಳ್ಳುವದನ್ನು ಕಲಿಯುವುದು**

ಸಭೆಯಲ್ಲಿ ಉದ್ಭವಿಸುವ ನಾಯಕತ್ವದ ಹೆಚ್ಚಾದ ಸಮಸ್ಯೆಗಳು ತತ್ವದೊಂದಿಗೆ ಯಾವ ಸಂಬಂಧವೂ ಇಲ್ಲದ "ವ್ಯಕ್ತಿತ್ವದ ಸಮಸ್ಯೆಗಳಿಗೆ" ಸಂಬಂಧಿಸಿರುತ್ತವೆ. ಜನರು ಭಿನ್ನವಾಗಿರುತ್ತಾರೆ! ಅವರಿಗೆ ಭಿನ್ನವಾದ ವ್ಯಕ್ತಿತ್ವಗಳಿರುತ್ತವೆ, ಭಿನ್ನವಾದ ಸಾಮಾಜಿಕ ಆರ್ಥಿಕ ವರ್ಗಗಳಿಂದ ಬಂದಿರುತ್ತಾರೆ, ಭಿನ್ನವಾದ ವಯಸ್ಸಿನವರಾಗಿರುತ್ತಾರೆ, ಭಿನ್ನವಾದ ಕುಟುಂಬ ಹಾಗೂ ಜಾನಾಂಗಿಕ ಹಿನ್ನೆಲೆಯಿಂದ ಬಂದಿರುತ್ತಾರೆ. ಭಿನ್ನವಾಗಿ ಪರಿಶುದ್ಧ ಬರಹಗಳನ್ನು ಅನುಸರಿಸುವವರಾಗಿದ್ದಾರೆ.

ಕೆಲವೊಂದು ಮಟ್ಟಿಗೆ, ದೇವರು ತನ್ನ ವಾಕ್ಯದಲ್ಲಿ ಸಭೆಯಲ್ಲಿ ನಾಯಕರ ಮತ್ತು ಸದಸ್ಯರಲ್ಲಿಯ ಸಾಂಸ್ಕೃತಿಕ ಭಿನ್ನತೆಯ ಸಮಸ್ಯೆಯ ಬಗ್ಗೆ ಗಮನವಹಿಸಿದ್ದಾನೆ. ಸೇವೆ ಮಾಡತಕ್ಕವರು ಎಂಥ ಜನರಾಗಿರಬೇಕು ಮತ್ತು ಅವರು ಸೇವೆ ಮಾಡಬೇಕಾದ ವಿಧಾನವು ಯಾವುದು ಎಂಬುದನ್ನು ಆತನು ನಿರ್ಧರಿಸಿದ್ದಾನೆ. ಸೇವಕ ನಾಯಕರಂತೆ ವರ್ತಿಸುವ ಅರ್ಹತೆಯುಳ್ಳ ಹಿರಿಯರನ್ನು ಹೊಂದಿಕೊಂಡಿರುವುದು ಸಾಂಸ್ಕೃತಿಕ ಭಿನ್ನತೆಯಿಂದ ಕಾರಣವಾಗುವ ಸಮಸ್ಯೆಗಳನ್ನು ತಡೆಗಟ್ಟುತ್ತದೆ. ಸ್ಥಳಿಕ ಸಭೆಯ ಸದಸ್ಯರೊಳಗಿಂದ ನಾಯಕರನ್ನು (ಹಿರಿಯರನ್ನು) ಆಯ್ಕೆ ಮಾಡುವದಕ್ಕಾಗಿಯೂ ದೇವರು ಒದಗಿಸಿದ್ದಾನೆ. ಈ ಜನರು ಸಭೆಯ ಸಂಸ್ಕೃತಿಯ ಭಾಗವಾಗಿರ ಬಹುದಾಗಿದೆ, ಆದುದರಿಂದ ನಾಯಕರ ಮತ್ತು ಸದಸ್ಯರ ಮಧ್ಯದಲ್ಲಿ ಉದ್ಭವಿಸಬಹುದಾದ ತೊಡಕು ಕಡಿಮೆ ಮಾಡಲ್ಪಟ್ಟಿದೆ.

ಭಿನ್ನತೆಗಳ ಕಾರಣದಿಂದ ಸಮಸ್ಯೆಗಳು ಇನ್ನೂ ಬರಬಹುದು. ನಾಯಕರು ಸದಸ್ಯತ್ವದ ಮಹತ್ತರವಾದ ಭಾಗದಿಂದ ಸಾಂಸ್ಕೃತಿಕವಾಗಿ ಹೊರಗಿನವನಾಗಿರಬಹುದು. ನಾಯಕರು ವಿದ್ಯಾವಂತನಾಗಿರಬಹುದು ಮತ್ತು ಅನುಯಾಯಿಗಳ ಹೆಚ್ಚಾಗಿ ಅವಿದ್ಯಾವಂತರಾಗಿರಬಹುದು; ಅವನು ಪಟ್ಟಣದವನಾಗಿರಬಹುದು ಮತ್ತು ಅವರು "ಗ್ರಾಮದವರಾಗಿರ ಬಹುದು"; ಅವನು ಉತ್ತರದವನಾಗಿರಬಹುದು, ಅವರು "ದಕ್ಷಿಣದವರಾಗಿರಬಹುದು" ಅವನು "ಕೈಗಾರಿಕೆಯವನು" ಆಗಿರಬಹುದು, ಅವರು "ಕೃಷಿಕರು" ಆಗಿರಬಹುದು, ಇದಲ್ಲದೇ, ವ್ಯಕ್ತಿಗತ ಭಿನ್ನತೆಗಳು ನಾಯಕನನ್ನು ನಾಯಕನಿಂದ, ಇಲ್ಲವೇ ನಾಯಕನನ್ನು ಸದಸ್ಯರಿಂದ ಬೇರ್ಪಡಿಸಬಹುದು, ಕೆಲವು ಜನರು ಆಶಾವಾದಿಗಳೂ, ಕೆಲವು ಜನರು ನಿರಾಶಾವಾದಿಗಳೂ, ಆಗಿರುತ್ತಾರೆ, ಕೆಲವರು "ಉಳಿತಾಯ ಮಾಡುವವರೂ," ಕೆಲವರು "ಖರ್ಚುಮಾಡುವವರೂ" ಆಗಿರುತ್ತಾರೆ. ಕೆಲವರು "ಅಂತರ್ಮುಖಿಗಳು" ಮತ್ತು ಕೆಲವರು ಬಹಿರ್ಮುಖಿಗಳೂ ಆಗಿರುತ್ತಾರೆ: ಅಂಥ ಸಾಂಸ್ಕೃತಿಕ ಮತ್ತು ವ್ಯಕ್ತಿತ್ವದ ಭಿನ್ನತೆಗಳು ಅಲ್ಪವಾಗಿ ಕಂಡು ಬರಬಹುದು, ಆದರೆ ಅವು ಮೇಲಿಂದ ಮೇಲೆ ಸಭೆಯ ತೊಂದರೆಗಳ ಹೃದಯದಲ್ಲಿರುತ್ತವೆ.

ಅಂಥಹ ಭಿನ್ನತೆಗಳ ಬಗ್ಗೆ ಸಭಾ ನಾಯಕನು ಹೇಗೆ ವ್ಯವಹರಿಸಬೇಕು? ಭಕ್ತಿಯುಳ್ಳ ನಾಯಕನು ನಂಬಿಕೆಯ ವಿಷಯಗಳನ್ನು ಕುರಿತು ಬಿದ್ದು ಹೋಗುವದಿಲ್ಲ. ಹೀಗಿದ್ದರೂ, ಅವಸರದ ಪ್ರಶ್ನೆಗಳ ಮೇಲೆ ಬಿಟ್ಟುಕೊಡಲು ಮನಸ್ಸುಳ್ಳವನಾಗಿರುತ್ತಾನೆ, ಒಪ್ಪಂದ ಮಾಡಿಕೊಳ್ಳಲು ಬಯಸುತ್ತಾನೆ. ಹಾಗೆ ಮಾಡುವದರಿಂದ ಸಮಾಧಾನವನ್ನು ಹುಟ್ಟಿಸಿ, ಸಭೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವದಾದರೆ ಹಾಗೆ ಮಾಡುತ್ತಾನೆ, ಅವನು ತಾನು ವಾಸಿಸುವವರ ಮತ್ತು ಕೆಲಸ ಮಾಡುವವರ ಮಧ್ಯದಲ್ಲಿ ಅವರೊಂದಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಾನೆ. ಪೌಲನಂತೆ ಅವನು "ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥವನಾಗಲು" ಪ್ರಯತ್ನಿಸುತ್ತಾನೆ (1 ಕೊರಿಂಥ 9:22). ಕ್ರಿಸ್ತನು ಯಾರನ್ನು ರಕ್ಷಿಸಲಿಕ್ಕೆ ಪರಲೋಕವನ್ನು ಬಿಟ್ಟು ಭೂಲೋಕಕ್ಕೆ ಬಂದು ಅವರೊಂದಿಗೆ

ಸಂಪೂರ್ಣವಾಗಿ ತನ್ನನ್ನು ಗುರುತಿಸಿಕೊಂಡದ್ದರ ಉದಾಹರಣೆಯನ್ನು ಪೌಲನು ತೆಗೆದು ಕೊಂಡನು:

> ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣ ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು. ತಾನೇ ಶೋಧಿ ಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿ ಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ (ಇಬ್ರಿಯ 2:17, 18; ನೋಡಿರಿ 4:15).

ಸಭಾನಾಯಕನು ತನಗೂ ಮತ್ತು ಇತರರಿಗೂ ಮಧ್ಯದಲ್ಲಿ ಸೇತುವೆಯನ್ನು ಕಟ್ಟಲು ಸಂಪೂರ್ಣವಾಗಿ ಶಕ್ತನಾಗಲಿಕ್ಕಿಲ್ಲ, ಆದರೆ ಹಾಗೆ ಮಾಡುವಲ್ಲಿ ಅವನು ಹೆಚ್ಚು ಯಶಸ್ವಿಯಾಗುವಾಗ, ಅವನು ತನ್ನ ಸ್ವಂತಕ್ಕಿಂತ ಹೆಚ್ಚಾಗಿ ಇತರರ ದೃಷ್ಟಿಕೋನದಿಂದ ನೋಡಲು ಅಶಕ್ತನಾಗುವನು, ತನ್ನೊಂದಿಗೆ ಭಿನ್ನವಾಗಿರುವವರನ್ನು ನಡಿಸಲು ಬಹುಶಃ ಅವನು ಶಕ್ತನಾಗಿರುವದಿಲ್ಲ.

## ಮುಕ್ತಾಯ

ಒಬ್ಬ ಬಹಿರಂಗ ಭಾಷಣಕಾರನು ತಾನು ಏನಾಗಿರುವನೆಂದು ಗ್ರಹಿಸಿಕೊಂಡಿರುವನೋ ಅದರ ಕಾರಣದಿಂದ ಮುಖ್ಯವಾಗಿ ಮನವೊಲಿಸುವವನಾಗಿರುತ್ತಾನೆ, ಮನವೊಲಿಸುವ ಈ ಅಂಶವು "ನೈತಿಕ ಮನವೊಲಿಸುವಿಕೆ" ಎಂದು ತಿಳಿಯಲ್ಪಟ್ಟಿರುತ್ತದೆ. ಪುರಾತನ ಅಲಂಕಾರ ಶಾಸ್ತ್ರಜ್ಞರು ಭಾಷಣಕಾರನು ಒಳ್ಳೆ ಗುಣಲಕ್ಷಣದ ಮನುಷ್ಯನಿಗಾಗಿ ಅಗತ್ಯತೆಯನ್ನು ಗುರುತಿಸಿದರು. ಕ್ವಿಂಟಿಲಿಯನು ಭಾಷಣಕಾರನನ್ನು "ಮಾತಾಡುವದರಲ್ಲಿ ಕೌಶಲ್ಯವುಳ್ಳ ಒಬ್ಬ ಒಳ್ಳೆ ಮನುಷ್ಯ ಎಂದು ನಿರೂಪಿಸಿದ್ದಾನೆ."[3] ಹೀಗಿದ್ದರೂ ಭಾಷಾಣಕಾರನಿಗೆ "ಒಳ್ಳೆಯ ಮನುಷ್ಯ"ನಾಗಿರಬೇಕೆಂದು ಗ್ರಹಿಸಿಕೊಳ್ಳುವುದು ಅಷ್ಟೇ ಮಹತ್ವದ್ದು ಆಗಿದೆ. ಕೆಲವು ಸಲ ಸಭೆಯ ನಾಯಕರಿಗೆ ಒಳ್ಳೆಯ ಗುಣಲಕ್ಷಣವಿರುವುದು, ಆದರೆ ವ್ಯಕ್ತಿತ್ವದ ಠಕ್ಕು ಮಾತುಗಳು ಆ ಸಂಗತಿಯನ್ನು ಇತರರು ಗುರುತಿಸುವದಕ್ಕೆ ಅಸಾಧ್ಯವಾಗುತ್ತದೆ. ಅವರು ಪ್ರಾಥಮಿಕವಾಗಿ ಉದಾಹರಣೆಯಿಂದ, ಬೋಧನೆಯಿಂದ ಮತ್ತು ಮನವೊಲಿಸುವದರಿಂದ ನಡಿಸುವದರಿಂದ ಸಾಧ್ಯವಾದಷ್ಟು ಮಟ್ಟಿಗೆ ಅಂಥ ಠಕ್ಕು ಮಾತುಗಳನ್ನು ತೆಗೆದು ಹಾಕುವ ಅಗತ್ಯತೆ ಇರುತ್ತದೆ. ಮತ್ತು ಅವರನ್ನು ಒಳ್ಳೆಯ ಜನರನ್ನಾಗಿ ಮಾಡುವದಲ್ಲದೇ ಹಿಂಬಾಲಿಸಲು *ಯೋಗ್ಯವಾದ ಒಳ್ಳೆಯ ಜನರಾಗಿ ಗುರುತಿಸಲ್ಪಡುವ ಸಾಧ್ಯತೆಯನ್ನು* ಅದು ಮಾಡುತ್ತದೆ

"ಕೆಲವೊಂದನ್ನು ಜಯಿಸಲು ನಾವು ಮನೋಹರವಾಗಿರತಕ್ಕದ್ದು" ಎಂದು ಹೇಳಲ್ಪಟ್ಟಿದೆ. "ಮನೋಹರವಾದ ಪರಿಶುದ್ಧತೆಯು" ಹೀಗೆ ನಿರೂಪಿಸಲ್ಪಟ್ಟಿದೆ. *"ದೇವರ ಪರಿಶುದ್ಧವಾದ ಪ್ರಶಾಂತತೆಯು* ಮುಖದಲ್ಲಿ ಪ್ರತಿಬಿಂಬಿಸಿದೆ; *ದೇವರ ಪರಿಶುದ್ಧಾವಾದ ಮೌನತೆಯು* ಧ್ವನಿಯಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ, *ದೇವರ ಪರಿಶುದ್ಧ ಕೃಪಾಭರಿತತೆಯು* ರೀತಿಯಲ್ಲಿ ವ್ಯಕ್ತ ಪಡಿಸಲ್ಪಟ್ಟಿದೆ; *ದೇವರ ಪರಿಶುದ್ಧ ಪರಿಮಳವು* ಇಡೀ ಜೀವನದಿಂದ ಹೊರ ಹೊಮ್ಮುತ್ತಿದೆ.'

---

ಟಿಪ್ಪಣೆಗಳು

[1]"ಸೇವಕ ನಾಯಕತ್ವವು" ಇತರ ಕ್ಷೇತ್ರಗಳಲ್ಲಿ - ಉದಾಹರಣೆಯಾಗಿ ಕೆಲಸದಲ್ಲಿ ಮತ್ತು ಮನೆಯಲ್ಲಿ ಪರಿಣಾಮಕಾರಿಯಾಗಿರುವುದು. [2]Marvin Phillips, "Remember That You Are in 'The People Business,' " *The Challenger,* 7th and Poplar church of Christ, Murray, Ky.